ಬಂಗಲೆ ತಲುಪಿಬಿಡೋಣ ಎಂದುಕೊಂಡ ಹುಲಗಪ್ಪ ಮೆಟ್ಟಲೇರಿ, ಅಲ್ಲಲ್ಲಿ ಕೂತು ಸುಧಾರಿಸಿಕೊಂಡು, ಈ ಹಿಂದೆ ಓದಿದ್ದ ಕಲ್ಲುಗಳ ಮೇಲಿನ ಮಾಸಿದ ಅಕ್ಷರಗಳನ್ನು ಮತ್ತೆ ಓದಿಕೊಂಡು, ಮುಂದೆ ಸಾಗುತ್ತಿರುವಾಗ, 'ಇಷ್ಟೆಲ್ಲ ಮೆಟೀರಿಯಲ್ ಕಲೆಕ್ಟ್ ಮಾಡಿದೀಯ! ಯಾಕೆ ಒಣ ಹಿಸ್ಟರಿ ಥೀಸಿಸ್ ಬರೀತೀಯ! ಒಳ್ಳೇ ಕಾದಂಬರಿ ಬರೆದುಬಿಡು' ಎಂದು ಡಿ.ಆರ್. ನಾಗರಾಜ್ ಹೇಳಿದ್ದು ನೆನಪಾಯಿತು. ಬೆಂಗಳೂರಿನಲ್ಲಿ ಹಿಸ್ಟರಿ ಎಂ.ಎ. ಮಾಡುವಾಗ ಹಾಸ್ಟೆಲ್ಲಿನಲ್ಲಿ ಹುಲಗಪ್ಪನ ಪಕ್ಕದ ರೂಮಿನಲ್ಲೇ ಇದ್ದ ಡಿ.ಆರ್. ನಾಗರಾಜ್ ಕನ್ನಡದಲ್ಲಿ ರಿಸರ್ಚ್ ಮಾಡಿ, ವಿಮರ್ಶಕನಾಗಿ ಸ್ಟಾರ್ ಆಗಿಬಿಟ್ಟಿದ್ದ! ಅವತ್ತೊಂದು ದಿನವಿಡೀ ಹುಲಗಪ್ಪನ ರೂಮಿನಲ್ಲೇ ಕೂತು ಅವನ ಮೆಟೀರಿಯಲ್ಲೆಲ್ಲ ಸರಸರ ಓದಿ ದಂಗಾಗಿದ್ದ. 'ಹೇಗಿದ್ರೂ ಈಗಾಗಲೇ ಒಳ್ಳೇ ಸೋಷಿಯಲ್, ಪೊಲಿಟಿಕಲ್ ಆ್ಯಂಗಲ್ ಇರೋ ಶಾರ್ಟ್ ಸ್ಟೋರೀಸ್ ಬರೆದಿದೀಯ! ಈಗ ಇದೇ ಮೆಟೀರಿಯಲ್ ಬಳಸಿ ಸಾಲಿಡ್ ಸಾಮಾಜಿಕ ಆ್ಯಂಗಲ್ ಇಟ್ಕೊಂಡು ಒಳ್ಳೇ ನಾವೆಲ್ ಬರೆದುಬಿಡು, ಸೀರಿಯಸ್ಸಾಗಿ ಹೇಳ್ತಿದೀನಿ' ಎಂದಿದ್ದ. ಅಬ್ಬಬ್ಬಾ... ಕಾದಂಬರಿ ಅಂದ್ರೆ ನೂರಾರು ಪುಟ ಬರೀಬೇಕು! ಅದೂ ಇತಿಹಾಸದ ಪಾತ್ರ, ಘಟನೆ ಎಲ್ಲದರ ಮೇಲೂ ಊಹೆ, ಕಲ್ಪನೆ ಮಾಡಿಕೊಂಡು! ಈ ತನಕ ತನ್ನ ಸುತ್ತಲ ಜನ, ಪ್ರಸಂಗ, ಘಟನೆ ಇವೆಲ್ಲವನ್ನೂ ನೋಡಿ ನೋಡಿ ವರ್ಷಗಟ್ಟಲೆ ಮನಸ್ಸಿನಲ್ಲೇ ತಿರುವಿ ಹಾಕಿ ಬರೆದು, ಹರಿದು ಏಳೆಂಟು ಸಣ್ಣ ಕಥೆ ಬರೆದಿದ್ದ ಹುಲಗಪ್ಪನಿಗೆ ಕಾದಂಬರಿ ಗೀದಂಬರಿ ತನ್ನ ಕೈಲಿ ಆಗಹೋಗದ ಕೆಲಸ ಎನ್ನಿಸಿತು. ಅದರಲ್ಲೂ ನೂರಾರು ವರ್ಷಗಳ ಹಿಂದಿನ ಪಾತ್ರಗಳನ್ನು ಅತಿ ಅಲಂಕಾರದ ಭಾಷೆಯಲ್ಲಿ, ರೊಮ್ಯಾಂಟಿಕ್ಕಾಗಿ ಬಣ್ಣಿಸುವ ಐತಿಹಾಸಿಕ ಕಾದಂಬರಿ ಅಂದರಂತೂ ಅವನಿಗೆ ಬಲು ರೇಗುತ್ತಿತ್ತು! 'ಆ ಐತಿಹಾಸಿಕ ಕಾದಂಬರೀನೂ ಮನುಷ್ಯರು ಬರೆಯೋ ಥರ ಬರೀಬೌದು ಕಣಲೇ!' ಅಂತ ಡಿ.ಆರ್. ತಿವಿದಿದ್ದು ನೆನಪಾಯಿತು.

'ಶುರು ಮಾಡೋಕೆ ಮೊದಲು ಹಂಗನ್ನಿಸುತ್ತೆ. ಕಥೆಗಾರನಾಗಿ ನೀನು ನೋಡೋ ಎಲ್ಲಾದಕ್ಕೂ ಮೇಲೊಂದು ಅರ್ಥ ಇರುತ್ತೆ; ಒಳಗೆ ಇನ್ನೂ ಏನೇನೋ ಅರ್ಥ ಕಾಣುತ್ತೆ. ಒಂದು ಬಾವೀನ ಬಗ್ಗಿ ನೋಡಿದರೆ ಮನುಷ್ಯನ ನಿಗೂಢ ಮನಸ್ಸಿನ ಥರ ಕಪ್ಪಾಗಿ ಕಾಣಲ್ವ? ಈಗ ನಿಮ್ಮೂರಿನ ಮೂರು ಸುತ್ತಿನ ಕೋಟೇನೇ ನೋಡು, ಅದೇ ದೊಡ್ಡ ಸಿಂಬಲ್ ಥರ ಕಾಣಲ್ವ?' ಎಂದಿದ್ದ ಡಿ.ಆರ್. ಐದಾರು ವರ್ಷದ ನಂತರ ಸಿಕ್ಕಾಗ ಹುಲಗಪ್ಪನ ರಿಸರ್ಚ್ ಬಗ್ಗೆ ಕೇಳಿದ್ದ. ತ್ರಿಭುವನ ಮಹಿಪಾಲರ್ ಗೊಂಡರ್ ಜಾತಿಯವರು ಎಂದ ತಕ್ಷಣ 'ಲವ್ಲಿ' ಎಂದು ಸಂಭ್ರಮಿಸಿದ್ದ ಡಿ.ಆರ್., 'ಇದೇ ಕಣಲೇ ನಿನ್ನ ಕಾದಂಬರಿಯ ಆತ್ಮ. ಒಂದು ಕಾಲಕ್ಕೆ ರಾಜ್ಯ ಆಳಿದ ಗೊಂಡ ಜಾತಿಯವರು ಮುಂದೆ ಹೇಗೆ ಶೆಡ್ಯೂಲ್ಡ್ ಟ್ರೈಬ್ಸ್ ಆಗಿ ಜಾತಿ ಶ್ರೇಣೀಕರಣದಲ್ಲಿ ಕೆಳಕ್ಕಿಳಿದರು? ಯೋಚನೆ ಮಾಡು. ಇದನ್ನೇ ನಾನು 'ವಿಸ್ಮೃತಿ' ಅಂತ ಹೇಳ್ತಿರೋದು!' ಎಂದಾಗಲಂತೂ ಹುಲಗಪ್ಪ ದಂಗಾಗಿ ಹೋಗಿದ್ದ.

ಡಿ.ಆರ್. ಹೇಳಿದ ಮಾತು ಕೇಳಿದ ಮೇಲಂತೂ ಹುಲಗಪ್ಪನ ರಿಸರ್ಚಿನ ದಿಕ್ಕೇ ಬದಲಾಗಿ ಹೋಯ್ತು. ಜಾತಿಯ ಒಳಸುಳಿಗಳನ್ನು ಅರ್ಥ ಮಾಡಿಕೊಳ್ಳದೆ ಇಂಡಿಯಾದ ಯಾವುದೇ ರಾಜರ, ಪಾಳೇಗಾರರ, ಸಾಮಂತರ ಇತಿಹಾಸವೂ ಸರಿಯಾಗಿ ಗೊತ್ತಾಗಲಾರದು ಎಂಬುದನ್ನು ಹುಲಗಪ್ಪ ಕಂಡುಕೊಳ್ಳತೊಡಗಿದ. ಎಲ್ಲೆಲ್ಲಿಂದಲೋ ಸಣ್ಣ ಪುಟ್ಟ ದಾಖಲೆಗಳನ್ನು ಅಗೆದು ತೆಗೆಯುತ್ತಾ, ಓದುತ್ತಾ ತನ್ನ ಜಾತಿಯ ಚರಿತ್ರೆಯೇ ಬೇರೆ ಥರ ಕಾಣತೊಡಗಿತು. ಒಂದು ಜಾತಿಯ ರಾಜನ ಶೌರ್ಯ, ಸಾಹಸಗಳನ್ನು ಕಲ್ಪಿಸಿಕೊಂಡು ಹುಸಿಯಾಗಿ, ಹಸಿಯಾಗಿ ಬರೆಯುವುದು ಅನೈತಿಕ; ಹಾಗೆಯೇ ಒಂದು ಜಾತಿಯ ಕಾಲಕಾಲದ ಅಂತಸ್ತುಗಳನ್ನು ಕುರಿತು ಸರಿಯಾಗಿ ರಿಸರ್ಚ್ ಮಾಡದೆ ಸುಮ್ಮನೆ ಬರೆಯುವುದೂ ಅನೈತಿಕ! ತ್ರಿಭುವನ ಮಹಿಪಾಲರ್ ಜಾತಿಯ ಬಗ್ಗೆ ದೇಸಾಯಿ ಇನ್ನೂ ಬೇರೆ ಥರದ ಮೆಟೀರಿಯಲ್ ಸಂಗ್ರಹಿಸಿದ್ದರೆ ಅದನ್ನು ಇಸ್ಕೋಬೇಕು ಅಂದುಕೊಂಡ.

ಇತ್ತಿತ್ತಲಾಗಂತೂ ಇತಿಹಾಸದ ಘಟನೆಗಳ ಮೇಲುನೋಟದ ಅರ್ಥಗಳು, ಅವುಗಳ ಒಳಾರ್ಥಗಳು, ಮರೆತು ಹೋದ ಘಟ್ಟಗಳು ಇವೆಲ್ಲ ಹುಲಗಪ್ಪನಿಗೆ ಥರಂಥರವಾಗಿ ಗೋಚರಿಸತೊಡಗಿದ್ದವು. ಇವತ್ತು ಮೂರನೇ ಸುತ್ತಿನ ಮೆಟ್ಟಲು ಹತ್ತುವಾಗ ಡಿ.ಆರ್. ಹೇಳಿದ್ದನ್ನೇ ನೆನೆಯುತ್ತಾ ಕೋಟೆಯನ್ನು ಇವತ್ತು ಹೊಸದಾಗಿ ನೋಡುವಂತೆ ನೋಡಿದ: ಅಬ್ಬಬ್ಬ!